ಅ.ದಾ.ನಂ. 2/2014
ಪಿ.ಡಬ್ಲ್ಯು-1

ಸಾಕ್ಷಿಯನ್ನು ಇಂದು ದಿನಾಂಕಃ 24.09.2019 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟಿ ಸವಾಲು 4 ನೇ ಪ್ರತಿವಾದಿ ಹಾಗೂ ವಿಜಿಜಿ ವಕೀಲರನ್ನು ಕೂಗಿಸಿ ಕರೆಸಲಾಗಿ ಗೈರು ಹಾಜರಿದ್ದರಿಂದ ಪಾಟಿ ಸವಾಲು ಇಲ್ಲ ಎಂದು ತಗೆದುಕೊಳ್ಳಲಾಯಿತು.</u>**

**<u>ಪಾಟಿ ಸವಾಲು ಪ್ರತಿವಾದಿ 5 ಹಾಗೂ 6 ರ ಪರವಾಗಿ ಶ್ರೀ ಎಮ್ ಹೆಚ್ ಕೆ ವಕೀಲರಿಂದ.</u>**

ಹೊಸ ಸರ್ವೆ ನಂ.680 ಒಟ್ಟು ಗೂಡಿವಿಕೆಯ ಮುಂಚೆ ಸರ್ವೆ ನಂ.176 ಇತ್ತು ಎಂದರೆ ಸರಿ. ಸರ್ವೆ ನಂ.176 ಹಾಗೂ ಇತರೆ ಜಮೀನು ಮಿರ್ಜಾ ಬೇಗ ಮುಲ್ಲಾ ರವರ ಹೆಸರಿನಲ್ಲಿತ್ತು ಎಂದರೆ ಸುಳ್ಳು. ಮಿರ್ಜಾ ಬೇಗ ತೀರಿಕೊಂಡ ನಂತರ ಸರ್ವೆ ನಂ.176 ಎಂದರೆ ಹೊಸ ಸರ್ವೆ ನಂ.680 ಇದು ಆತನ ಮಗನಾದ ಲಾಡಬೇಗನ ಹೆಸರಿನಲ್ಲಿ ವಾರಸಾನಾತೆಯಿಂದ ಡ ನಂ.215 ದೃಢೀಕರಣ ಆಯಿತು ಎಂದರೆ ಸಾಕ್ಷಿಯು ಅದು ರದ್ದಾಗಿದೆ ಎಂದು ನುಡಿಯುತ್ತಾರೆ. ಹಳೆ ಸರ್ವೆ ನಂ.176 ಎಂದರೆ ಹೊಸ ಸರ್ವೆ ನಂ.680 ಇದು 1963 ರಲ್ಲಿ ಡ ನಂ.1720 ರ ಪ್ರಕಾರ ಲಾಡಬೇಗ ರವರ ಹೆಸರಿಗೆ ಮರು ಮಂಜೂರಾತಿ ಆಯಿತು ಎಂದರೆ ಸುಳ್ಳು. 1964 ರಲ್ಲಿ ಹಳೆ ಸರ್ವೆ ನಂ.176 ಇದು ಡ ನಂ.1724 ರ ಪ್ರಕಾರ ಸರ್ವೆ ನಂ.680 ಆಯಿತು ಎಂದರೆ ಸರಿ. 1968 ರಲ್ಲಿ ಚನ್ನಪ್ಪಗೌಡ ತಂ.ಪರಪ್ಪಗೌಡ ಪಾಟೀಲ ಎನ್ನುವವರು ಈ ಸರ್ವೆ ನಂ.680 ನ್ನು ಮೂಲ ಮಾಲೀಕರಿಂದ 1500 ರೂ.ಗಳಿಗೆ ನೊಂದಾಯಿತ ಕ್ರಯ ಪತ್ರದ ಪ್ರಕಾರ ಖರೀದಿಸಿದ್ದು ಡ ನಂ.1827 ಮಂಜೂರಾಗಿತ್ತು ಎಂದರೆ ಸುಳ್ಳು. ನಾನು ಆ ಕಾಲದಲ್ಲಿ ಅಸಲು ದಾವೆ 35/78

ಸಲ್ಲಿಸಿದ್ದೇನು. ಆ ಕಾಲದಲ್ಲಿ ನನಗೆ ಡ ನಂ.1827 ರ ಬಗ್ಗೆ ಗೊತ್ತಿರಲಿಲ್ಲ. ಅ.ದಾ.35/78 ವಜಾ ಆಯಿತು ಎಂದರೆ ಸಾಕ್ಷಿಯು ನಮ್ಮಂತೆ ಆಯಿತು ಅವರು ಬಿಟ್ಟು ಕೊಟ್ಟಿದ್ದರು ಎನ್ನುತ್ತಾರೆ. ಅ.ದಾ.ನಂ.35/1978 ರಲ್ಲಿ ನಾನು ಈ ಡ ನಂ.1827 ರ ಬೆಗ್ಗೆ ಉಲ್ಲೇಖ ಮಾಡಿರುತ್ತೇನೆಂದರೆ ಸರಿಯಲ್ಲ. 5 ನೇ ಪ್ರತಿವಾದಿಯಾದ ಮುದಕವ್ವಳು ಇದೆ ಸರ್ವೆ ನಂಬರಿನಲ್ಲಿ 5 ಎಕರೆ 7 ಗುಂಟೆ ಜಮೀನನ್ನು 2002 ರಲ್ಲಿ ಚನ್ನಪ್ಪಗೌಡ ಪಾಟೀಲನ ಮಗನಾದ ಪರಪ್ಪಗೌಡನಿಂದ 2 ಲಕ್ಷ 52 ಸಾವಿರ ರೂ.ಗಳಿಗೆ ಖರೀದಿಸಿದ್ದಳು ಎಂದರೆಸುಳ್ಳು. ಸದರಿ 5 ಎಕರೆ 7 ಗುಂಟೆ ಜಮೀನನ್ನು ದಸ್ತುಗೊಂಡು ಆದಾಗಿನಿಂದ 5 ನೇ ಪ್ರತಿವಾದಿಯೇ ಕಬ್ಜೆಯಲ್ಲಿದ್ದಾರೆಂದರೆ ಸರಿಯಲ್ಲ. ಅದೇ ರೀತಿಯಾಗಿ 6 ನೇ ಪ್ರತಿವಾದಿ 8 ಎಕರೆ ಜಮೀನನ್ನು ಅವರಿಂದ ದಿಃ 09.11.2005 ರಂದು 3 ಲಕ್ಷ 52 ಸಾವಿರ ರೂ.ಗಳಿಗೆ ಖರೀದಿಸಿದ್ದಾರೆಂದರೆ ಸುಳ್ಳು. ಆ ಪ್ರಕಾರ ಅವರು ಸಹ ಮಾಲ್ಕಿ ನಾತೆಯಿಂದ ಸದರಿ ಜಮೀನಿನ ಕಬ್ಜಾ ವಹಿವಾಟಿಯಲ್ಲಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ 5 ಹಾಗೂ 6 ರವರು ಸದರಿ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಡ ನಂ.1827 1968 ರಲ್ಲಿಯೇ ಮಂಜೂರಾಗಿರುವುದನ್ನು ಅವುಗಳನೆಲ್ಲ ಯಾರು ಪ್ರಶ್ನೆ ಮಾಡಿದೆ ಇದ್ದರಿಂದ ಸದುದ್ದೇಶದಿಂದ ಖರೀದಿದಾರರಾಗಿದ್ದಾರೆಂದರೆ ಸುಳ್ಳು. ಪ್ರತಿವಾದಿ 5 ಹಾಗೂ 6 ರವರು ಸೂಕ್ತವಾದ ಮಾರುಕಟ್ಟೆ ಬೆಲೆ ಮಾಡಿ ಈ ಜಮೀನನ್ನು ಖರೀದಿಸಿದ್ದಾರೆಂದರೆ ಸಾಕ್ಷಿ ಆ ಕಾಲದಲ್ಲಿ ದಾವೆ ಇನ್ನು ನಡೆಯುತಿತ್ತು ಎಂದು ನುಡಿಯುತ್ತಾರೆ. ದಾವೆ ನಡೆಯುತ್ತಿದ್ದ ಬಗ್ಗೆ ಸಬ ರಜಿಸ್ಟರ ಕಚೇರಿಯಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ ನೋಟಿಸನ್ನು ನೀಡಿದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮುದಕವ್ವ ರಿಗೆ ಆ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿದ್ದೇವು ಎಂದು ನುಡಿಯುತ್ತಾರೆ. ಡಿಸಿ ಕಚೇರಿಯಲ್ಲಿ ಆದ ಆರಟಿಎಸ ಅಪೀಲನಲ್ಲಿ ಪಕ್ಷಗಾರನ್ನಾಗಿ ಮಾಡಿದ್ದೆ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ.

2. ಹೊಸ ಸರ್ವೆ ನಂ.680 ಹಳೆ ಸರ್ವೆ ನಂ.176 ಮೊದಲು ನವಾಶರೀಫ ಮುಲ್ಲಾ ರವರ ಮಾಲ್ಕಿಯಲ್ಲಿತ್ತು ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ನವಾಶರೀಫ ತೀರಿಕೊಂಡ ನಂತರ ಅವರ ಮಗ ರಾಜಬೇಗ ಈ ಆಸ್ತಿಗೆ ವಾರಸುದಾರನಾದ ಎಂದು ಸಾಕ್ಷಿ ಪ್ರಮಾಣಪತ್ರದಲ್ಲಿ ಸುಳ್ಳು ಬರೆಸಿದ್ದೇನೆಂದರೆ ಸರಿಯಲ್ಲ. ಮುಂದೆ ಯಾಸೀನಖಾನ ರವರು ಈ ಜಮೀನಿನ ಮಾಲೀಕನಾದನು, ನವಾಶರೀಫ ರವರ ಹೆಂಡತಿ ಹುಸೇನಬಿ 1935 ರಲ್ಲಿ ಯಾಸೀನಖಾನನಿಗೆ ಮೃತ್ಯು ಪತ್ರ ಬರೆದುಕೊಟ್ಟಿದ್ದರು ಎಂದು ಸುಳ್ಳು ಬರೆಸಿರುತ್ತೇನೆಂದರೆ ಸರಿಯಲ್ಲ. ದಿಃ

14.10.1957 ರಂದು ಯಾಸೀನಖಾನ ರವರು ನನಗೆ ಸರ್ವೆ ನಂ.680 ನ್ನು ಮೃತ್ಯು ಪತ್ರ ಮಾಡಿಕೊಟ್ಟರು ಎಂದು ಸುಳ್ಳು ಬರೆಸಿರುತ್ತೇನೆಂದರೆ ಸರಿಯಲ್ಲ. ಯಾಸೀನಖಾನ, ತದನಂತರದಲ್ಲಿ ಈ ಜಮೀನಿನ ಕಬ್ಜಾ ವಹಿವಾಟಿಯಲ್ಲಿ ಇದ್ದೇನೆಂದು ಸುಳ್ಳು ಬರೆಸಿರುತ್ತೇನೆಂದರೆ ಸರಿಯಲ್ಲ. ಸರ್ವೆ ನಂ.680 ರ ಬಗ್ಗೆ ಮಾಡಿದ ಈ ದಾವೆಯು ಖೊಟ್ಟಿಯಾಗಿದ್ದು ವಜಾ ಆಗಲು ಅರ್ಹ ಇದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಈ ಹಿಂದೆ ಪ್ರತಿವಾದಿ 1 ರಿಂದ 3 ರ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಪ್ರತಿವಾದಿ 10 ಹಾಗೂ 12 ರಿಂದ 14 ರ ಪರವಾಗಿ ಯಾವುದೆ ಲಿಖಿತ ಹೇಳಿಕೆಯನ್ನು ಸಲ್ಲಿಸದೆ ಇದ್ದ ಕಾರಣ ಅವರ ಪರ ಪಾಟಿ ಸವಾಲಿನ ಪ್ರಶ್ನೆ ಉದ್ಭವಿಸುವುದಿಲ್ಲ.**

**ಪಾಟಿ ಸವಾಲು ಪ್ರತಿವಾದಿ 23 ಹಾಗೂ 24 ರ ಪರವಾಗಿ ಶ್ರೀ ಎಮ್ ಆರ್ ಆಯ್ ವಕೀಲರಿಂದ**

ನಿಜಾಮುದ್ದೀನ ಮೈನುದ್ದೀನ ಖಾಜಿ ಹಾಗೂ ನೂರುದ್ದೀನು ಮೈನುದ್ದೀನ ಖಾಜಿ ನನಗೆ ಏನು ಸಂಬಂದವಿಲ್ಲ. ನನ್ನ ತಂದೆಯ ಹೆಸರು ಸಹ ಮೈನುದ್ದೀನ ಖಾಜಿ ಇದೆ. ನನ್ನ ತಂದೆ ಮೈನುದ್ದೀನ ಖಾಜಿ ರವರಿಗೆ ನಾಲ್ಕು ಜನ ಗಂಡು ನಾಲ್ಕು ಜನ ಹೆಣ್ಣು ಮಕ್ಕಳು. ಸದರಿ ಗಂಡು ಮಕ್ಕಳು ಎಂದರೆ ಮಕ್ಬುಲ, ಅಬ್ದುಲ ಅಜೀಜ, ಸಾಕ್ಷಿ ಪುನಃ ಇನ್ನು ಇಬ್ಬರು ಗಂಡು ಮಕ್ಕಳ ಹೆಸರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹೆಣ್ಣು ಮಕ್ಕಳು ಎಂದರೆ ಹಮಿದಾಬಿ, ಮೆಹಬೂಬಿ, ಖೈರುಬಿ ಹಾಗೂ ಬಿಸ್ಮಿಲ್ಲಾ. ನನ್ನ ಇಬ್ಬರು ತಮ್ಮಂದಿರು ತಮ್ಮ ಹೆಸರುಗಳನ್ನು ತಹಶೀಲ್ದಾರ ಕಚೇರಿಯಲ್ಲಿ ಬದಲಾಯಿಸಿಕೊಂಡಿದ್ದಾರೆ. ಅವರು ಹುಟ್ಟಿದಾಗ ಅವರ ಹೆಸರು ನನಗೆ ಗೊತ್ತಿಲ್ಲ. ಈ ರೀತಿಯಾಗಿ ತಹಶೀಲ್ದಾರ ಕಚೇರಿಯಲ್ಲಿ ಅವರು ಬದಲಾಯಿುಸಿಕೊಂಡಿರುವ ಹೆಸರುಗಳು ಎಂದರೆ ನಿಜಾಮುದ್ದೀನ, ಹಾಗೂ ನೂರುದ್ದೀನ. ಅವರು ಏನೇನು ಕೆಲಸ ಮಾಡುತ್ತಾರೆಂದು ಎಲ್ಲಿ ಇರುತ್ತಾರೆಂದು ನನಗೇನು ಗೊತ್ತಿಲ್ಲ. ನನ್ನ ತಾಯಿಯ ಹೆಸರು ದಾದಿಮಾ. ನನ್ನ ತಾಯಿ ತೀರಿಕೊಂಡಿದ್ದಾರೆ.

2. ನನ್ನ ತಂದೆಗೆ ರಾಜಬೇಗ ತಂ.ನವಾಶರೀಫ ಮುಲ್ಲಾ ಏನು ಸಂಬಂದ ಇರಲಿಲ್ಲ. ನನ್ನ ದೊಡ್ಡಪ್ಪನಿಗೆ ಸಂಬಂದ ಇತ್ತು ಸಾಕ್ಷಿ ಪುನಃ ನುಡಿಯುತ್ತಾರೆ. ಹುಸೇನಬಿ ರವರು ನವಾಶರೀಫ ಮುಲ್ಲಾ ರವರ ಹೆಂಡತಿ ಅಲ್ಲ. ಅವಳು ರಾಜಬೇಗನ ಹೆಂಡತಿ. ನನ್ನ ವಾದಪತ್ರದಲ್ಲಿ

ಓದಿ ಹೇಳಿದ 2 ನೇ ಖಂಡಿಕೆಯಲ್ಲಿ ಈ ಹಿಂದೆ ನವಾಶರೀಫ ಮುಲ್ಲಾ ರವರು ದಾವಾಸ್ತಿಗಳ ಮಾಲೀಕರಾಗಿದ್ದರು 1925 ರಲ್ಲಿ ಅವರು ತಮ್ಮ ಹೆಂಡತಿ ಹುಸೇನಬಿ ಯನ್ನು ಬಿಟ್ಟು ತೀರಿಕೊಂಡರು ಎಂದು ಬರೆದಿದೆ ಎಂದರೆ ಸಾಕ್ಷಿಯು ಬೆರಳಚ್ಚು ತಪ್ಪಾಗಿದೆ ಎನ್ನುತ್ತಾರೆ. ಸದರಿ ಹುಸೇನಬಿಗೆ ನನ್ನ ತಂದೆಗೆ ಏನು ಸಂಬಂದ ಇರುವುದಿಲ್ಲ. ಯಾಸೀನಖಾನ ನನ್ನ ತಂದೆಯ ಅಣ್ಣನಾಗಬೇಕು ಅವರು ಖಾಸ ಅಣ್ಣ ತಮ್ಮಂದಿರು. ರಾಜಬೇಗ ರವರು ಯಾಸೀನಖಾನರವರಿಗೆ ಮಾತ್ರ ಸಂಬಂದ ನನ್ನ ತಂದೆಗೆ ಸಂಬಂದ ಇಲ್ಲ. ವಾದಪತ್ರದ 1 ನೇ ಖಂಡಿಕೆಯಲ್ಲಿ ಕಾಣಿಸಿರುವ ಕ್ರಮ ಸಂಖ್ಯೆ 1 ರಿಂದ 8 ರ ಆಸ್ತಿಗಳಿಗೆ ಮೂಲ ಮಾಲೀಕರು ನವಾಶರೀಫ ಮುಲ್ಲಾ ಅವರ ನಂತರ ಅವರ ಮಗ ರಾಜಬೇಗ ಮುಲ್ಲಾ ಮಾಲೀಕರಾದರು. ರಾಜಬೇಗ ರವರು ಹಾಗೂ ಹುಸೇನಬಿ ಇಬ್ಬರು ಸೇರಿಕೊಂಡು ಯಾಸೀನಖಾನ ರವರ ಹೆಸರಿನಲ್ಲಿ ಈ ಆಸ್ತಿಗಳ ಬಗ್ಗೆ ಕಾಗದ ಮಾಡಿದ್ದರು. ಆಸ್ತಿಗಳ ಬಗ್ಗೆ ಡ ಮಾಡಿದ್ದರು, ವರದಿಗಳನ್ನು ನೀಡಿದ್ದರು. ರಾಜಬೇಗ ಹಾಗೂ ಹುಸೇನಬಿ ರವರು ಸೇರಿಕೊಂಡು ಮಾಡಿ ಸದರಿ ಡ ಗಳನ್ನು ಈ ದಾವೆಯಲ್ಲಿ ಹಾಜರ ಮಾಡಿರುತ್ತೇನೆ. ರಾಜಬೇಗ ಹಾಗೂ ಹುಸೇನಬಿ ರವರಿಗೆ ಮಕ್ಕಳು ಇರಲಿಲ್ಲ. ಹುಸೇನಬಿ ಗಂ.ರಾಜಬೇಗ ಮುಲ್ಲಾ ರವರು 1935 ರಲ್ಲಿ ಮೃತ್ಯು ಪತ್ರ ಮಾಡಿರುತ್ತಾರೆಂದು ದಾಖಲೆಯನ್ನು ಹಾಜರ ಮಾಡಿರುತ್ತೇನೆ.

**ಈ ಹಂತದಲ್ಲಿ ಪ್ರಕರಣ ರಾಜಿಯಾಗುತ್ತದೇ ಏನೊ ಎಂದು ನೋಡುವ ಸಲುವಾಗಿ ಮಧ್ಯಸ್ಥಿಕೆ ಕೇಂದ್ರಕ್ಕೆ ಕಳುಹಿಸುವ ಸಲುವಾಗಿ ಮುಂದುವರೆದ ಪಾಟಿ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

(ಶ್ರೀಮತಿ ಎಸ್.ಎಲ್.ಲಾಡಖಾನ್)
ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ